ಯಾರಾದರೂ ಸಾಬೀತು ಮಾಡಿದ್ದಲ್ಲಿ , ಅಂತಹ ಅಧಿಕಾರಿ: ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ಇ) ನಿಯಮಾನುಸಾರವಾಗಿ ಹಣ ಬಿಡುಗಡೆ ಆದೇಶವು ಅಸಿಂದುವಾಗಿದೆ.

459(754) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗದಗ ಜಿಲ್ಲೆ ಮುಂಡರಗಿ ಕ್ಷೇತ್ರದಲ್ಲಿನ ಪಶುಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಲಾಗಿದೆಯೇ;

ಆ) ಹೊಸದಾಗಿ ಪಶುಚಿಕಿತ್ಸಾಲಯಗಳನ್ನು ಸರ್ಕಾರ ಮಂಜೂರು ಮಾಡುವುದೇ;

ಇ) ಮುಂಡರಗಿ ಪಶು ಆಸ್ಪತ್ರೆಯು ಕಟ್ಟಡ ಅರ್ಧಕ್ಕೆ ನಿಂತಿರುವುದನ್ನು ಪೂರ್ಣಗೊಳಿಸಲಾಗುವುದೇ?

ಶ್ರೀ ಮಿರಾಜುದ್ದೀನ್ ಎಸ್. ಪಟೀಲ್(ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ಇಲ್ಲ

ಆ) ಹೊಸ ಪಶು ಚಿಕಿತ್ಸಾಲಯಗಳನ್ನು ಮಂಜೂರು ಮಾಡುವ ಕಾರ್ಯಕ್ರಮ ಸದ್ಯಕ್ಕೆ ಇರುವುದಿಲ್ಲ.

ಇ) ಎಸ್. ಜಿ. ಎಸ್. ವೈ ಯೋಜನೆಯಡಿಯಲ್ಲಿ 2004–05ನೇ ಸಾಲಿನಲ್ಲಿ ರೂ.4.00ಲಕ್ಷ ವಂಟನ ಬಿಡುಗಡೆ ಮಾಡಿದ್ದು ಕಟ್ಟಡದ ಕಾಮಗಾರಿ ಪ್ರಗತಿಯಲ್ಲಿದೆ.

460(645) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯ ಭಾಲ್ಕಿ ಕ್ಷೇತ್ರದಲ್ಲಿ ಹೊಸ ಪಶುಚಿಕಿತ್ಸಾಲಯಗಳ ಸ್ಥಾಪನೆ ಬಗ್ಗೆ ಬೇಡಿಕೆ ಇದೆಯೇ;

ಆ) ಹೊಸ ಪಶು ಚಿಕಿತ್ಸಾಲಯಗಳನ್ನು ಎಂದಿನಂತೆ ಸ್ಥಾಪಿಸಲಾಗುವುದು?

ಶ್ರೀ ಮಿರಾಜುದ್ದೀನ್ ಎಸ್.ಪಟೀಲ್(ಪಶುಸಂಗೋಪನೆ ಮತ್ತು ವಕ್ಫ ಸಚಿವರು) :

ಅ) ಇದೆ

ಆ) ಹೊಸ ಪಶು ಚಿಕಿತ್ಸಾಲಯಗಳನ್ನು ಸ್ಥಾಪಿಸುವ ಕಾರ್ಯಕ್ರಮ ಪ್ರಸ್ತುತ ಇರುವುದಿಲ್ಲ.

461(647) ಶ್ರೀ ರಘುವತಿಭಟ್ .ಕೆ.(ಉಡುಪಿ) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಣ್ಣಕೈಗಾರಿಕೆಗಳಿಗೆ ಈ ಸಾಲಿನಲ್ಲಿ ಎಷ್ಟು ಸಬ್ಸಿಡಿ ಹಣ ಬಿಡಿಗಡೆಗೊಳಿಸಲಾಗಿದೆ (ಪಟ್ಟಿ ನೀಡುವುದು):

ಆ) ಬಾಕಿ ಉಳಿದ ಸಣ್ಣ ಕೈಗಾರಿಕೆಗಳಿಗೆ ಹಣವನ್ನು ಯಾವಾಗ ಬಿಡುಗಡೆ ಗೊಳಿಸಲಾಗುವುದು.